**ದಿನಾಂಕ:29/06/2018 ರಂದು ಶುಕ್ರವಾರ ಬೆಳಿಗ್ಗೆ 11:00 ಗಂಟೆಗೆ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಉಪ ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.**

**ಹಾಜರಿದ್ದ ಅಧಿಕಾರಿಗಳು / ನೌಕರರು.**

ಶ್ರೀ/ಶ್ರೀಮತಿ/ಕುಮಾರಿ:

1) ನಾರಾಯಣ ಕಳ್ಳಿಮನಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ವಿಭಾಗ
2) ಜಗದೀಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆಳ್ಳೂರು ಉಪವಿಭಾಗ
3) ರಾಮಚಂದ್ರ : ಲೆಕ್ಕಾಧಿಕಾರಿ, ನಾಗಮಂಗಲ ವಿಭಾಗೀಯ ಕಛೇರಿ
4) ಹೇಮ.ಆರ್ : ಸಹಾಯಕ ಇಂಜಿನಿಯರ್(ತಾಂ), ಬೆಳ್ಳೂರು ಉಪವಿಭಾಗ
5) ಶಿವಣ್ಣ : ಪ್ರಭಾರ ಹಿರಿಯ ಸಹಾಯಕರು,ಬೆಳ್ಳೂರು ಉಪವಿಭಾಗ
6) ನಂದಕುಮಾರ್.ಪಿ : ಶಾಖಾಧಿಕಾರಿ,ಬೆಳ್ಳೂರು ಶಾಖೆ
7) ನವಿನ್ ಕುಮಾರ್ : ಶಾಖಾಧಿಕಾರಿ, ಕದಬಹಳ್ಳಿ ಶಾಖೆ
8) ಗಿರಿಜಮ್ಮ : ಶಾಖಾಧಿಕಾರಿ,ಬಿಂಡಿಗನವಿಲೆ ಶಾಖೆ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ ಬೆಳ್ಳೂರು ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ ಕೆ.ಇ.ಆರ್.ಸಿ ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು ವಿದ್ಯುತ್ ಬಳಕೆದಾರರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಹಾಗೂ ಗ್ರಾಹಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್ ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ / ಲಿಖಿತವಾಗಿ ಸಲ್ಲಿಸುವಂತೆ ವಿದ್ಯುತ್ ಗ್ರಾಹಕರಲ್ಲಿ / ಸಾರ್ವಜನಿಕರಲ್ಲಿ ಕೇಳಲಾಯಿತು.

ಈ ಹಿಂದಿನ ಸಭೆಯಲ್ಲಿ ನೀಡಲಾದ ದೂರುಗಳನ್ನು ಹಾಗೂ ಅದರ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಮೊದಲು ಪರಿಶೀಲಿಸಲಾಯಿತು. ಬಾಕಿ ಇರುವ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸುವಂತೆ ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರು ಸೂಚಿಸಿದರು.

1)ಶ್ರೀ.ಶೆಟ್ಟರು ಮೊಬೈಲ್ ನಂ:-9448160568

ದೂರು:- 1).ಐ.ಪಿ ಪರಿವರ್ತಕಕ್ಕೆ ಎಲ್‌ಟಿ ಕಿಟ್ ಅಳವಡಿಸಲು ಕೋರಿರುತ್ತಾರೆ.

ಕ್ರಮ:- ಎಲ್‌ಟಿ ಕಿಟ್‌ಗಳನ್ನು ಶೀಘ್ರವಾಗಿ ಅಳವಡಿಸಲು ತಿಳಿಸಿರುತ್ತಾರೆ

ದೂರು:- 2)ಕಾರಬಯಲು ಮಿಲ್ ಹಿಂಭಾಗ ವಿದ್ಯುತ್ ಮಾರ್ಗವು ಜೋತುಬಿದ್ದಿರುತ್ತದೆ ಮಧ್ಯಭಾಗದಲ್ಲಿ ಕಂಬಗಳನ್ನು ಅಳವಡಿಸಿಕೊಡಲು ಕೋರಿರುತ್ತಾರೆ.

ಕ್ರಮ:- ನಿಗಮದ ನಿಯಮದ ಅನುಸಾರ ಶಾಖಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿ ತಯಾರು ಮಾಡಿ ವಿಭಾಗೀಯ ಕಛೇರಿಗೆ ಸಲ್ಲಿಸಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತಾರೆ.

2)ಶ್ರೀ.ತಿಮ್ಮೇಗೌಡ ಕರಿಜೀರಹಳ್ಳಿ ಮೊಬೈಲ್ ನಂ:-

ದೂರು:- ಶ್ರೀ.ತಿಮ್ಮೇಗೌಡ ಬಿನ್ ಹನುಮಂತೇಗೌಡ ರವರು ಅಕ್ರಮ-ಸಕ್ರಮ ಯೋಜನೆಯಡಿ ದಿನಾಂಕ 16/08/2011 ರಂದು ಐ.ಪಿ ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಹಣ ಪಾವತಿಸಿರುತ್ತಾರೆ, ಸದರಿ ಐ.ಪಿ. ಸೆಟ್‌ಗೆ ಮೂಲಭೂತ ಸೌಕರ್ಯ ಕಲ್ಪಿಸಿಕೊಡಲು ಮನವಿ ಮಾಡಿರುತ್ತಾರೆ.

ಕ್ರಮ:- ನಿಗಮದ ನಿಯಮದ ಅನುಸಾರ ಶಾಖಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿ ತಯಾರು ಮಾಡಿ ವಿಭಾಗೀಯ ಕಛೇರಿಗೆ ಸಲ್ಲಿಸಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತಾರೆ.

3)ಶ್ರೀ.ನರಸಿಂಹರಾಜು ಪಿ.ಚಿಟ್ಟನಹಳ್ಳಿ

ದೂರು:- ಪಿ.ಚಿಟ್ಟನಹಳ್ಳಿ ಐ.ಪಿ ಪರಿವರ್ತಕವು ಅಧಿಕಭಾರದಿಂದ ಆಗಿಂದಾಗೆ ಕೆಟ್ಟುಹೋಗುತ್ತಿರುತ್ತದೆ ಎಂದು ದೂರು ನೀಡಿರಿರುತ್ತಾರೆ. ಇದಕ್ಕೆ ಪ್ರತಿಯಾಗಿ ಶಾಖಾಧಿಕಾರಿಗಳು ಸದರಿ ಐ.ಪಿ 63ಕೆವಿಎ ಪರಿವರ್ತಕದ ಮೇಲೆ 18 ಐ.ಪಿ ಸ್ಥಾವರಗಳಿದ್ದು ಅದರಲ್ಲಿ 10 ಸಂಖ್ಯೆ ಸಕ್ರಮಗೊಂಡಿದ್ದು ಇನ್ನುಳಿದ ಐ.ಪಿ ಸ್ಥಾವರಗಳು ಸಕ್ರಮಗೂಂಡಿರುವುದಿಲ್ಲ, ಎಂದು ತಿಳಿಸಿರುತ್ತಾರೆ.

ಕ್ರಮ:-ಎಲ್ಲಾ ಐ.ಪಿ ಸೆಟ್‌ಗಳು ಸಕ್ರಮಗೊಂಡನಂತರ ನಿಗಮದ ನಿಯಮದ ಅನುಸಾರ ಹಚ್ಚುವರಿಯಾಗಿ ಪರಿವರ್ತಕ ಅಳವಡಿಸಲು ತಿಳಿಸಿರುತ್ತಾರೆ.

4) ಶ್ರೀ.ಶೇಖರ್ ದೊಡ್ಡಘಟ್ಟ ಮೊಬೈಲ್ ನಂ:-9035636703

ದೂರು:- ದೊಡ್ಡಘಟ್ಟ ಗ್ರಾಮದ ವ್ಯಾಪಿಯ ವೈರ್‌ಗಳು ಸ್ಯಾಗ್ ಆಗಿರುತ್ತದೆ ಅದನ್ನು ಸರಿಪಡಿಸಲು ಕೋರಿದರು.

ಕ್ರಮ:- ನಿಗಮದ ನಿಯಮದ ಅನುಸಾರ ಶಾಖಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿ ತಯಾರು ಮಾಡಿ ವಿಭಾಗೀಯ ಕಛೇರಿಗೆ ಸಲ್ಲಿಸಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತಾರೆ.

5) ಶ್ರೀ.ಜಯರಾಮೇಗೌಡ

ದೂರು:-ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಹಣ ಪಾವತಿ ಮಾಡಿ ಸಕ್ರಮೀಕರಣಗೊಂಡಿರುವ ಐ.ಪಿ.ಸ್ಥಾವರಗಳಾದ BLIP-789, BLIP - 792 ಸ್ಥಾವರಗಳಿಗೆ ಇದುವರೆಗೆ ಮೂಲಭೂತ ಸೌಕರ್ಯ ಕಲ್ಪಿಸಿರುವುದಿಲ್ಲ ,ಮೂಲಭೂತ ಸೌಕರ್ಯ ಕಲ್ಪಿಸಿಕೊಡಲು ಮನವಿ ಮಾಡಿರುತ್ತಾರೆ.

ಮಾಡಲು ಸೂಚಿಸಲಾಗಿದೆ.

ದೂರು:-(2) ನಾಗಮಂಗಲಪಟ್ಟಣದ ಮಸೀದಿರಸ್ತೆಯಲ್ಲಿರುವ ವಿದ್ಯುತ್ ವಾಹಕವು ಶಿಥಿಲವಾಗಿದ್ದು ಕೂಡಲೆ ಬದಲಾವಣೆ ಮಾಡುವ ಕುರಿತು.

ಕ್ರಮ:- ಐ.ಪಿ.ಡಿ.ಎಸ್ ಯೋಜನೆಯಡಿಯಲ್ಲಿ ಈ ಮೇಲಿನ ವಾಹಕವನ್ನು ಬದಲಾಯಿಸಲು ಅಂದಾಜುಪಟ್ಟಿಯನ್ನು ಸಲ್ಲಿಸಲಾಗಿದ್ದು, ಇದುವರೆವಿಗೂ ಕಾಮಗಾರಿಯನ್ನು ಆರಂಭಿಸಲು ವಿಳಂಬವಾಗಿರುವುದಕ್ಕೆ ಕಾರಣ ವೇನೆಂಬುದನ್ನು ಪ್ರಶ್ನಿಸಿ ಸಹಾಯಕ ಕಾರ್ಯನಿರ್ವಾಹ ಇಂಜಿನಿಯರ್(ವಿ), ನಾಗಮಂಗಲ ರವರಿಗೆ ವಿವರಣೆಯನ್ನು ಸಲ್ಲಿಸುವಂತೆ ಆದೇಶಿಸಲಾಗಿದೆ.

ದೂರನ್ನು ನೀಡಿದ ಗ್ರಾಹಕರ ಸಂಖ್ಯೆ-41

ಒಟ್ಟು ದೂರು/ಸಮಸ್ಯೆಗಳು- 29

ಮೆಮೊ ಸಂಖ್ಯೆ:ಕಾನಿಇಂ(ವಿ)/ಸಇಂ(ತಾ)/ನಾ/18-19/ 1692-700 ದಿನಾಂಕ: 07/07/18.

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ,
ನಾಗಮಂಗಲ.

ಪ್ರತಿಯನ್ನು ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ ಮಂಡ್ಯ.

ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

1. ಲೆಕ್ಕಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವಿಭಾಗ ನಾಗಮಂಗಲ.
2. ಲೆಕ್ಕಾಧಿಕಾರಿ, (ಆಂಪ) ಚಾ.ವಿ.ಸ.ನಿ.ನಿ., ಪಾಂಡವಪುರ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಉಪವಿಭಾಗ ನಾಗಮಂಗಲ.
4. ಶಾಖಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಶಾಖೆ ನಾಗಮಮಗಲ/ದೇವಲಾಪುರ/ಚೀಣ್ಯ.
5. ಕಿಆಸ/ಮು.ಕ